

ಟಿಯನನ್ಮೆನ್ ಚೌಕ



ಟೆಂಪಲ್ ಆಫ್ ಹೆವನ್ ಎದುರು ಪತ್ನಿಯೊಂದಿಗೆ ಲೇಖಕರು

ಪ್ರದರ್ಶಿಸಲು ಕಾತರದಿಂದಿರುವ ಚೀನಾ, ಬೀಜಿಂಗ್‌ನಲ್ಲಿ ಪಂಚತಾರ ಶೌಚಾಲಯಗಳನ್ನು ನಿರ್ಮಿಸಿದೆ. ಇಂತಹದೊಂದು ಶೌಚಾಲಯದಲ್ಲಿ ಎಟಿಎಂ, ವೆಂಡಿಂಗ್ ಮೆಷಿನ್, ವೈಫೈ, ಪರ್ಸನಲ್ ಟಿವಿ, ಸಂಗೀತ, ಕಾರ್ ಬ್ಯಾಟರಿ ಚಾರ್ಜಿಂಗ್ ಸೇರಿದಂತೆ ಅನೇಕ ಸೌಲಭ್ಯಗಳಿವೆ. ಇವೆಲ್ಲ ನಿಜಕ್ಕೂ ಬೇಕೆ? ಪರಿಸರ ನೈರ್ಮಲ್ಯವನ್ನು ಕಾಪಾಡಲು ಈ ಅದ್ಧೂರಿ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎನ್ನುತ್ತಾರೆ.

ಒಂದು ಕಾಲಘಟ್ಟದಲ್ಲಿ ಚೀನಾ ಜನಸಂಖ್ಯೆ ಜಗತ್ತಿನ 21%ರಷ್ಟಿದ್ದು, ದೇಶದ ಅಭಿವೃದ್ಧಿಗೆ ಅಡ್ಡಿಯಾಗಿತ್ತು. ಹಾಗಾಗಿ, ಸುಮಾರು ಮೂರು ದಶಕಗಳ ಹಿಂದೆ ದೇಶವನ್ನಾಳುವ ಕಮ್ಯುನಿಸ್ಟ್ ಪಕ್ಷದ ಒಂದೇ ಮಗುವೆನ್ನುವ ಕುಟುಂಬ ಯೋಜನಾ ನೀತಿಯನ್ನು ಜಾರಿಗೊಳಿಸಲಾಗಿತ್ತು. ಇತ್ತೀಚೆಗಷ್ಟೇ ಇದನ್ನು ಸಡಿಲಗೊಳಿಸಿ ಎರಡು ಮಕ್ಕಳ ಮಿತಿಯನ್ನು ಜಾರಿಗೊಳಿಸಿದ್ದರ ಖುಶಿಯನ್ನು ಚೆಂಗ್ ಹಂಚಿಕೊಂಡಳು. ಚೀನೀಯರ ಸ್ವಾತಂತ್ರ್ಯಕ್ಕೆ ಮತ್ತು ಮಾನವ ಹಕ್ಕುಗಳಿಗೆ ಈ ಹೊಸ ನೀತಿಯಲ್ಲಿನ ಕಡಿವಾಣದ ಬಗ್ಗೆ ವ್ಯಾಪಕವಾಗಿ ಟೀಕೆಗಳಿದ್ದರೂ, ಸರ್ಕಾರದ ನೀತಿ, ನಿಯಮಗಳ ಬಗ್ಗೆ ಮಾತನಾಡಲು ಚೆಂಗ್ ಸಿದ್ಧಳಿರಲಿಲ್ಲ. ತಮ್ಮ ರಾಷ್ಟ್ರದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಬೇರೊಂದು ದೃಷ್ಟಿಕೋನವಿದ್ದು, ಸರ್ಕಾರವನ್ನು ಯಾರೂ ಸಾರ್ವಜನಿಕವಾಗಿ ಖಂಡಿಸುವಂತಿಲ್ಲವೆಂದು ಹೇಳಿದಳು. ಆದ್ದರಿಂದ, ದೇಶವನ್ನೂ, ತಮ್ಮ ಜನಜೀವನವನ್ನೂ ಆಗಿಂದಾಗ್ಗೆ ಹೊಗಳುತ್ತಿದ್ದ ಚೆಂಗ್‌ಳ ಮಾತುಗಳು, ಇವಳು ಕಮ್ಯುನಿಸಮ್‌ನ ಹೊಗಳುಭಟ್ಟಳೋ ಎಂಬ ಅನುಮಾನವನ್ನೂ ಮೂಡಿಸುತ್ತಿತ್ತು.

ಚೀನಾದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವಿಲ್ಲದಿದ್ದರೂ, ಕೌಟುಂಬಿಕ ವಿಚಾರಗಳಲ್ಲಿ ಭಾರತದೊಡನೆ ಸಾಮ್ಯತೆಗಳಿವೆ. ಮೂರು ತಲೆಮಾರಿನವರು ಒಂದೇ ಸೂರಿನಲ್ಲಿರುವುದು ಸರ್ವೇಸಾಮಾನ್ಯ. ಮದುವೆಯ ವಿಚಾರದಲ್ಲಿ ತಂದೆ–ತಾಯಿಯರ, ಹಿರಿಯರ ಅಭಿಪ್ರಾಯ ಮುಖ್ಯ. ಅದೇ ರೀತಿ ನಮ್ಮಲ್ಲಿರುವಂತೆ ಹಿರಿಯರು ಮೊಮ್ಮಕ್ಕಳನ್ನು ನೋಡಿಕೊಳ್ಳುತ್ತಾರೆ. ಇಂದಿನ ಜಾಗತೀಕರಣದ ಯುಗದಲ್ಲಿ ಯುವ ಪೀಳಿಗೆಯವರು ಉದ್ಯೋಗಕ್ಕಾಗಿ ವಲಸೆ ಹೋಗುವುದು, ಮದುವೆಗೆ ಮುಂಚೆ ಆರ್ಥಿಕ ಭದ್ರತೆಯ ಬಗ್ಗೆ ಗಮನ ಹರಿಸುವುದು ಸಹಾ ನಮ್ಮ ಯುವಪೀಳಿಗೆಯವರಂತೆಯೇ.

ಬೀಜಿಂಗ್‌ನಲ್ಲಿ ನಮ್ಮಲ್ಲಿನ ಮಹಾನಗರಗಳಿಗಿಂತ ದಟ್ಟವಾದ ಟ್ರಾಫಿಕ್ ಒತ್ತಡವುಂಟು. 2010ರಲ್ಲಿ ಇಲ್ಲಿ ಉಂಟಾದ ಟ್ರಾಫಿಕ್‌ಜಾಮ್ 62 ಮೈಲಿ ಹಬ್ಬಿ, ಅದನ್ನು ನಿವಾರಿಸಲು ಸುಮಾರು 12 ದಿನ ಬೇಕಾಯಿತಂತೆ! ಈ ಸಮಸ್ಯೆಯಿಂದ ರೋಸಿಹೋಗಿದ್ದ ಸರ್ಕಾರ, ಹೊಸದೊಂದು ಪ್ರಯೋಗವನ್ನು ಮಾಡುತ್ತಿದೆ. ರಸ್ತೆಯಲ್ಲಿ ಸಂಚರಿಸುವ ಕಾರು ಇತ್ಯಾದಿ ಲಘು ಮೋಟಾರ್ ಗಾಡಿಗಳ ಮೇಲೆ ಸಂಚರಿಸುವ ಬಸ್ಸನ್ನು ಪ್ರಾಯೋಗಿಕವಾಗಿ ಬಿಡಲಾಗಿದೆ. ಸುಮಾರು 300 ಮಂದಿಯನ್ನು ಕೊಂಡೊಯ್ಯಬಹುದಾದ ಈ